**ಓ ಎಸ್ ನಂಃ 92/2018**
**ಪಿ ಡಬ್ಲ್ಯೂ ಃ 1**

**ದಿಃ 27.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್ ಎನ್ ಎಸ್ ವಕೀಲರಿಂದ :-**

7ನೇ ಪ್ರತಿವಾದಿ ಯಾರಿಂದ 1ನೇ ದಾವಾ ಅನುಸೂಚಿತ ಸ್ವತ್ತಿನ ಸ್ವಲ್ಪ ಭಾಗವನ್ನು ಖರೀದಿ ಮಾಡಿದ್ದಾರೆ ಎಂಬ ವಿಚಾರವನ್ನು ತಮ್ಮ ಭಾಗ ಪತ್ರದಲ್ಲಿ ತಿಳಿಸಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 7 ನೇ ಪ್ರತಿವಾದಿ 1ನೇ ದಾವಾ ಅನುಸೂಚಿತ ಸ್ವತ್ತಿನ ಸ್ವಲ್ಪ ಭಾಗವನ್ನು ಹೊನ್ನಮ್ಮ ಕೋಂ ಲೇಟ್ ಕುಳ್ಳಯ್ಯ ರವರಿಂದ ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಕ್ರಯ ಪತ್ರದ ಅನುಸಾರವಾಗಿ 7 ನೇ ಪ್ರತಿವಾದಿ ಹೆಸರಿಗೆ 1 ನೇ ಅನುಸೂಚಿತ ಸ್ವತ್ತಿನ ಸ್ವಲ್ಪ ಭಾಗಕ್ಕೆ ಸಂಬಂಧಪಟ್ಟಂತೆ ಖಾತೆ ವರ್ಗಾವಣೆ ಆಗಿದೆಯಾ ಎಂದರೆ ನನಗೆ ಗೊತ್ತಿಲ್ಲ. ಹೊನ್ನಮ್ಮ ಕೋಂ ಲೇಟ್ ಕುಳ್ಳಯ್ಯರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ದೊಡ್ಡನರಸಯ್ಯರವರ ಮಗ ಚಿಕ್ಕನರಸಯ್ಯ ನನ್ನ ತಂದೆ. ಚಿಕ್ಕಬೆಟ್ಟಯ್ಯನ ಮಗ ಕುಳ್ಳಯ್ಯರವರು ಹೊನ್ನಮ್ಮನ ಗಂಡ ಇರಬಹುದು ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ದಿಃ 12.09.1961 ನಮ್ಮ ತಂದೆ ಚಿಕ್ಕಬೆಟ್ಟಯ್ಯನ ಮಗ ಕುಳ್ಳಯ್ಯ ನವರಿಗೆ ಕೋರಮಂಗಲ ಗ್ರಾಮದ ಸರ್ವೆ ನಂ. 9/2 ರಲ್ಲಿ 17 1/2 ಗುಂಟೆಯನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರವನ್ನು ಈ ದಾವೆಯಲ್ಲಿ ತಾವು ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ದಿಃ 19.02.2003 ರಲ್ಲಿ ಕುಳ್ಳಯ್ಯ ನ ಹೆಂಡತಿ ಹೊನ್ನಮ್ಮರವರು ಮಾಡಿಕೊಟ್ಟಿರುವ ಕ್ರಯ ಪತ್ರವನ್ನು ನಾನು ಈ ದಾವೆಯಲ್ಲಿ ಪ್ರಶ್ನೆ ಮಾಡಿಲ್ಲ. ಸದರಿ ಕ್ರಯ ಪತ್ರಗಳ ಬಗ್ಗೆ 7 ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿದ ನಂತರವೂ ಸಹ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ತಮ್ಮ ತಂದೆಯು ಮರಣ ಹೊಂದಿದ ಸಮಯದಲ್ಲಿ ತಾವು ಪ್ರಾಪ್ತ ವಯಸ್ಕರಾಗಿದ್ದರಿ ಎಂದರೆ ಸರಿ. ತಾವು ಹುಟುವುದಿಕ್ಕಿಂತ ಮುಂಚೆ ತಮ್ಮ ತಂದೆ ಹಾಗೂ ಚಿಕ್ಕಪ್ಪರವರು ಯಾವ ಯಾವ ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆ ಎಂದು ತಾವು ತಿಳಿದುಕೊಂಡಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ 16 ರ ಕ್ರಯ ಪತ್ರದಲ್ಲಿ ಬರೆದಿರುವ ಒಕ್ಕಣೆಯನ್ನು ನಾನು ತಿಳಿದುಕೊಂಡಿರುವುದಿಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ಓದಿ ತಿಳಿದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಸರ್ವೆ ನಂ. 9/2 ಯಾವಾಗ ಪೋಡಿ ಆಗಿದೆ ಎಂದರೆ ಸಾಕ್ಷಿಯು ನಾವು ಎಲ್ಲವನ್ನು ಬರೆದುಕೊಟ್ಟಿದ್ದೇವೆ ಎಂದು ಸಾಕ್ಷ ನುಡಿಯುತ್ತಾರೆ. ತಾವು ದಾವಾ ಹಾಕುವ ಸಂದರ್ಭದಲ್ಲಿ ದಾವಾ ಅನುಸೂಚಿ ಸ್ವತ್ತಿನ ಸರ್ವೆ ನಂ. 9/2 ಎಂದು

ನಮೂದು ಮಾಡಿದ್ದೀರಿ ಆದರೆ ಸರ್ವೆ ನಂ. 9/2 ಎ ನಿಂದ 9/2 ಡಿ ವರೆಗೆ ಸಲ್ಲಿಸಿದ್ದೀರಿ ಎಂದರೆ ಸರಿ. ಸರ್ವೆ ನಂ. 9/2 ರ ವಿಸ್ತೀರ್ಣ 3 ಎಕರೆ 35 ಗುಂಟೆ ಎಂದರೆ ಸರಿ. ಈ ದಾವೆಯಲ್ಲಿ ಸರ್ವೆ ನಂ. 9/2 ರ ವಿಸ್ತೀರ್ಣ 2 ಎಕರೆ 15 ಗುಂಟೆಗೆ ಸಲ್ಲಿಸಿದ್ದೀರಿ ಎಂದರೆ ಸರಿ. ಸದರಿ ಸರ್ವೆ ನಂ. ಹಾಗೂ ವಿಸ್ತೀರ್ಣ ಯಾರ ಯಾರ ಹೆಸರಿನಲ್ಲಿದೆ ಎಂಬುದರ ಬಗ್ಗೆ ನಿರ್ದಿಷ್ಟವಾಗಿ ನಮೂದು ಮಾಡಿಲ್ಲ ಎಂದರೆ ಸರಿ. ಗಂಗಯ್ಯ ರವರು ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕ್ ಗೆ ಸರ್ವೆ ನಂ. 9/2 ಎ ನಲ್ಲಿ 22 ಗುಂಟೆ ಜಮೀನನ್ನು ಅಡಮಾನ ಮಾಡಿದ್ದಾರೆ ಸದರಿ ವಿಚಾರವನ್ನು ನಾನು ಪ್ರಶ್ನೆ ಮಾಡಿಲ್ಲ ಎಂದರೆ ಸರಿ. 7 ನೇ ಪ್ರತಿವಾದಿ ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿದ ನಂತರ ತಾವು ಸದರಿ ವಿಚಾರವನ್ನು ವಾದ ಪತ್ರದಲ್ಲಿ ತಿದ್ದುಪಡಿ ಮಾಡಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಗಂಗಯ್ಯ ನವರು ಯಾವ ವರ್ಷದಲ್ಲಿ ಸರ್ವೆ ನಂ. 9/2 ರಲ್ಲಿ ಸ್ವಲ್ಪ ಭಾಗವನ್ನು ಕ್ರಯಕ್ಕೆ ಪಡೆದಿದ್ದಾರೆ ಅವರ ಹೆಸರಿಗೆ ಯಾವಾಗ ಖಾತೆ ವರ್ಗಾವಣೆ ಆಗಿದೆ ಎಂಬ ವಿಚಾರವನ್ನು ತಾವು ತಿಳಿದುಕೊಂಡಿದ್ದೀರಿ ಎಂದರೆ ಸಾಕ್ಷಿ 2015 ರ ಸಾಲಿನಲ್ಲಿ ತಿಳಿದುಕೊಂಡಿದ್ದೇವೆ ಎಂದು ನುಡಿಯುತ್ತಾರೆ. ತಾವು ಜನನವಾಗುವುದಕ್ಕಿಂತ ಮುಂಚೆ ತಮ್ಮ ತಂದೆಯವರು ಆತನ ಭಾಗಕ್ಕೆ ಬಂದಿರುವ ಎಲ್ಲಾ ಆಸ್ತಿಗಳನ್ನು ಮಾರಾಟ ಮಾಡಿರುವ ಕಾರಣ ಸದರಿ ಸ್ವತ್ತುಗಳಲ್ಲಿ ತಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 9/2 ರಲ್ಲಿ 3 ಎಕರೆ 35 ಗುಂಟೆ ಪೈಕಿ ತಮ್ಮ ತಂದೆಯವರಿಗೆ 1 ಎಕರೆ 37 1/2 ಗುಂಟೆ ಹಿಸ್ಸೆಗೆ ಬಂದಿದೆ ಎಂದರೆ ಸರಿಯಲ್ಲ. ತಮ್ಮ ತಂದೆಯ ಹಿಸ್ಸೆಗೆ ಬಂದಿರುವ 1 ಎಕರೆ 37 1/2 ಗುಂಟೆ ಪೈಕಿ 1 ಎಕರೆ 20 ಗುಂಟೆ ಜಮೀನನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಉಳಿಕೆ ಜಮೀನನ್ನು ತಮ್ಮ ತಂದೆಯವರು ಚಿಕ್ಕಬೆಟ್ಟಯ್ಯ ನವರು ಕುಳ್ಳಯ್ಯ ನವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ಕಾರಣ ತಮಗೆ ದಾವಾ 1 ನೇ ಅನುಸೂಚಿ ಸ್ವತ್ತಿನಲ್ಲಿ ತಮಗೆ ಯಾವ ಹಕ್ಕು ಇಲ್ಲ ಎಂದರೆ ಸರಿಯಲ್ಲ. ತಮಗೆ ಈ ದಾವೆಗೆ ಸಂಬಂಧಪಟ್ಟ ಎಲ್ಲಾ ವಿಚಾರಗಳು ಗೊತ್ತಾಗಿದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ತಮ್ಮ ತಂದೆಯವರು ಆತನಿಗೆ ಬಂದಿರುವ ಎಲ್ಲಾ ಆಸ್ತಿಗಳು ಮಾರಾಟ ಮಾಡಿದ ನಂತರ ಮಂಡ್ಯ ಪಟ್ಟಣಕ್ಕೆ ಒಲಸೆ ಹೋಗಿದ್ದೀರಿ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಗೆ ಸೇರಿರುವ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ತಾವು ಈ ದಾವೆಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. 7 ನೇ

ಪಿ ಡಬ್ಲ್ಯೂ ಃ 1

ಪ್ರತಿವಾದಿ ಕ್ರಯಕ್ಕೆ ಪಡೆದಿರುವ ಪ್ರತ್ಯೇಕ ಚಕ್ಕುಬಂದಿಯನ್ನು ನಮೂದು ಮಾಡಿ ಈ ದಾವೆಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಕುಳ್ಳಯ್ಯ ಬಿನ್ ಚಿಕ್ಕಬೆಟ್ಟಯ್ಯ ನವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

**1 ರಿಂದ 5 ನೇ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**